**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ನ್ಯಾಯಾಲಯ, ಹರಿಹರ**

**ಸಿ.ಸಿ. ನಂ. 2556/2022**

| | | |
|---|---|---|
| ಹೆಸರು | ಹರೀಶ್ | ಪಿಡಬ್ಲ್ಯೂ-02 |
| ತಂದೆಯ ಹೆಸರು | ಪರಮೇಶ್ವರಪ್ಪ | ಸಿಡಬ್ಲ್ಯೂ-02 |
| ವಯಸ್ಸು | 32 ವರ್ಷ | |
| ಉದ್ಯೋಗ | ವ್ಯವಸಾಯ | ದಿಃ 03.04.2024 |
| ವಾಸ ಸ್ಥಳ | ಬೆಳ್ಳೂಡಿ ಗ್ರಾಮ | |
| ಮುಖ್ಯ ವಿಚಾರಣೆ | ಸಸಅ ರವರಿಂದ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಆರೋಪಿತರು ಗೊತ್ತು. ಮೃತ ರಾಜಪ್ಪ, ಚಾಸಾ–1,3 ಮತ್ತು 7 ರವರ ಪರಿಚಯವಿದೆ.

2. ಈಗ ನೋಡುತ್ತಿರುವ ಸ್ಥಳ ಪಂಚನಾಮೆ ಹಾಗೂ ಕಚ್ಚಾ ನಕಾಶೆಗಳಲ್ಲಿ ನನ್ನ ಸಹಿಗಳು ಇವೆ. ಅದೇ ರೀತಿ ಈಗ ನೋಡುತ್ತಿರುವ ಪೋಟೋದಲ್ಲಿ ನಾನು ಇದ್ದೇನೆ. ಸ್ಥಳ ಪಂಚನಾಮೆಯನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಪೋಟೋವನ್ನು ನಿಪಿ–3 ಎಂದು ಗುರುತಿಸಲಾಯಿತು.

3. ದಿಃ 21.12.2021 ರಂದು ರೋಷನ್ ಪ್ಯಾಲೇಸ್ ಡಾಬಾದ ಹತ್ತಿರ ಟ್ರಾಕ್ಟರ್ ಮತ್ತು ಕಾರು ಮಧ್ಯೆ ಸಂಭವಿಸಿದ ಅಪಘಾತದ ಕುರಿತು ಸ್ಥಳ ಪಂಚನಾಮೆ ಮಾಡಲು ಪೊಲೀಸರು ಬಂದಿದ್ದು, ಆ ಸಮಯದಲ್ಲಿ ನಿಪಿ–1 ಮತ್ತು 2 ಕ್ಕೆ ಸಹಿ ಹಾಕಿದ್ದು, ನಿಪಿ–3 ರಂತೆ ಪೋಟೋ ತೆಗೆದಿರುತ್ತಾರೆ. ಸದರಿ ಸಮಯದಲ್ಲಿ ಪೊಲೀಸರು ಸ್ಥಳ ಪರಿಶೀಲನೆ ಮಾಡಿ, ಬರವಣಿಗೆ ಮಾಡಿಕೊಂಡಿರುತ್ತಾರೆ. ಪಂಚನಾಮೆಯನ್ನು ಬೆ.10.15 ರಿಂದ 11.00 ಗಂಟೆಯವರೆಗೆ ಮಾಡಿರುತ್ತಾರೆ.

4. ಈಗ ನೋಡುತ್ತಿರುವ ವಾಹನ ಪರಿಶೀಲನಾ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಅದೇ ರೀತಿ ಈಗ ನೋಡುತ್ತಿರುವ ಪೋಟೋಗಳಲ್ಲಿ ನಾನು ಇದ್ದೇನೆ. ವಾಹನಾ ಪರಿಶೀಲನಾ ಪಂಚನಾಮೆಯನ್ನು ನಿಪಿ–4 ಎಂದು, ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು. ಸದರಿ ಪೋಟೋಗಳನ್ನು ನಿಪಿ–5 ಮತ್ತು 6 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಗೆ ನಾನು ಸ್ಥಳ ಪಂಚನಾಮೆ ಮಾಡಿದ ದಿನವೇ

ಹರಿಹರ ಗ್ರಾಮಾಂತರ ಪೊಲೀಸ್ ಠಾಣೆ ಆವರಣದಲ್ಲಿ ನಿಪಿ–4 ಕ್ಕೆ ಸಹಿ ಹಾಕಿರುತ್ತೇನೆ. ಪೊಲೀಸರು ನನ್ನ ಸಮಕ್ಷಮ ನಿಪಿ–4 ರಂತೆ ಪಂಚನಾಮೆ ಮಾಡಿ, ಅಪಘಾತಕ್ಕೊಳಗಾದ ಒಂದು ಟ್ರಾಕ್ಟರ್ ಹಾಗೂ ಕಾರನ್ನು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ನಿಪಿ–5 ಮತ್ತು 6 ರಂತೆ ಪೋಟೋ ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ಠಾಣೆಯಲ್ಲಿ ಮ.12.00 ರಿಂದ 12.45 ರವರೆಗೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶವನ್ನು ಕೋರುತ್ತಿದ್ದು, 400/–ಗಳ ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ,
ಹರಿಹರ